## ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

**(ರಕ್ಷಣಾ ಮಂತ್ರಾಲಯದ ಅಧೀನ ಭಾರತ ಸರ್ಕಾರದ ಒಂದು ಉದ್ಯಮ)**

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಬೆಂಗಳೂರು ಸಂಕೀರ್ಣಕ್ಕೆ ಮತ್ತು ಕಾರ್ಪೊರೇಟ್ ಕಚೇರಿಗೆ ಖಾಯಂ ಆಧಾರದ ಮೇಲೆ ಈ ಕೆಳಕಂಡ ಸಿಬ್ಬಂದಿಗಳ ಅವಶ್ಯಕತೆ ಇದೆ.

**I ಹುದ್ದೆಗಳು**

| ಕ್ರ. ಸಂ. | ಹುದ್ದೆ | ವಿದ್ಯಾರ್ಹತೆ | ಅರ್ಹತೋತ್ತರ ಅನುಭವ | ಹುದ್ದೆಗಳ ಸಂಖ್ಯೆ | ಮೀಸಲಾತಿ ವಿಧ | ಶ್ರೇಣಿ / ವೃತ್ತಿ ಹಾದಿ / ವೇತನ ಶ್ರೇಣಿ |
|---|---|---|---|---|---|---|
| **(1)** | **(2)** | **(3)** | **(4)** | **(5)** | **(6)** | **(7)** |
| 1 | ಸಂರಕ್ಷಣೆ ಅಧಿಕಾರಿ(ಪುರುಷ) ಅಥವಾ ಸಹಾಯಕ ಸಂರಕ್ಷಣ ಅಧಿಕಾರಿ (ಪುರುಷ) | ಯಾವುದೇ ವಿಷಯದಲ್ಲಿ ಪದವಿ | ಭಾರತೀಯ ಭೂಸೇನೆಯಿಂದ ಕ್ಯಾಪ್ಟನ್ ರೇಂಕ್ ನ ಎಸ್.ಎಸ್.ಸಿ. ಅಧಿಕಾರಿ / ನೌಕಾ ಪಡೆ / ವಾಯು ಸೇನೆ ಯಿಂದ ಸಮಾನ ರೇಂಕ್ / ಕೇಂದ್ರೀಯ ಅರೆಸೈನಿಕ ಸಂಘಟನೆಗಳ (ಸಿ ಎ ಪಿ ಎಫ್ ಗಳು) ಪ್ರಥಮ ದರ್ಜೆ ರಾಜಪತ್ರಿತ ಅಧಿಕಾರಿ. | ೦೧ | ಸಾಮಾನ್ಯ | ಇ-೨ ಶ್ರೇಣಿ<br>ವೇತನ ಶ್ರೇಣಿ ರು. 40,000/- 3 % - Rs. 1,40,000/- + ಸ್ವೀಕಾರ್ಯ ಭತ್ಯೆಗಳು<br>ಸಿ ಟಿ ಸಿ ರು. ೧೧.೩೧ ಲಕ್ಷಗಳು (ಅಂದಾಜು) |
| 2 | | | ಭೂಸೇನೆ / ನೌಕಾ ಪಡೆ / ವಾಯು ಸೇನೆ / ಕೇಂದ್ರೀಯ ಅರೆಸೈನಿಕ ಸಂಘಟನೆಗಳ ಸೇವೆಯಿಂದ(ಸಿ.ಎ.ಪಿ.ಎಫ್.ಗಳು) ನಿರ್ಗಮಿಸುವ ಸಮಯದಲ್ಲಿ ಸಮಯದಲ್ಲಿ ಜೆ.ಸಿ.ಒ ಶ್ರೇಣಿ ಹೊಂದಿರ ಬೇಕು. | | | ಇ-೧ ಶ್ರೇಣಿ<br>ವೇತನ ಶ್ರೇಣಿ ರು.30,000/- 3 % - ರು.1,20,000/- + ಸ್ವೀಕಾರ್ಯ ಭತ್ಯೆಗಳು<br>ಸಿ ಟಿ ಸಿ ರು. ೮.೮೫ ಲಕ್ಷಗಳು (ಅಂದಾಜು) |
| 3 | ಕಿರಿಯ ಮೇಲ್ವಿಚಾರಕರು - ಪುರುಷರು | ಎಸ್.ಎಸ್. ಎಲ್.ಸಿ | ಭಾರತೀಯ ಸಶಸ್ತ್ರ ಸೇನೆಯಲ್ಲಿ ೧೫ ವರ್ಷಗಳ ಸೇವೆ ಮತ್ತು ಜೆ.ಸಿ.ಒ. ಶ್ರೇಣಿ | ೦೧ | ಸಾಮಾನ್ಯ | ಶ್ರೇಣಿ- ವೇ.ವ.೮/ ವೃ.ಹಾ.-೫<br>ವೇತನ ಶ್ರೇಣಿ ರು.24,500 – 3% - ರು. 90,000/- + ಸ್ವೀಕಾರ್ಯ ಭತ್ಯೆಗಳು<br>ಸಿ.ಟಿ.ಸಿ. ರು.೬.೧೧ ಲಕ್ಷಗಳು (ಅಂದಾಜು) |
| 4 | ಹವಿಲ್ದಾರ್ (ಸಂರಕ್ಷಣೆ) - ಪುರುಷರು | ಎಸ್.ಎಸ್. ಎಲ್.ಸಿ | ಭಾರತೀಯ ಸಶಸ್ತ್ರ ಸೇನೆಯಲ್ಲಿ ೧೫ ವರ್ಷಗಳ ಸೇವೆ | ೨೦ | ಸಾಮಾನ್ಯ - ೧೦<br>ಇ.ಡಬ್ಲ್ಯೂ ಎಸ್ - ೦೧<br>ಇ.ಹಿ.ವ.- ೦೫<br>ಪ.ಜಾ. - ೦೨<br>ಪ.ಪಂ. - ೦೨ | ಶ್ರೇಣಿ- ವೇ.ವ.೩/ ವೃ.ಹಾ.-೩<br>ವೇತನ ಶ್ರೇಣಿ Rs. 20,500/- - 3%- Rs.79,000/- + ಸ್ವೀಕಾರ್ಯ ಭತ್ಯೆಗಳು<br>ಸಿ.ಟಿ.ಸಿ. ರು.೫.೧೧ ಲಕ್ಷಗಳು (ಅಂದಾಜು) |



2. **ಅರ್ಹತೆ ಮಾನದಂಡ :-**

**II** **(a) ರಾಷ್ಟ್ರೀಯತೆ** : ಅಭ್ಯರ್ಥಿಯು ಭಾರತದ ನಾಗರೀಕನಾಗಿ ಇರಬೇಕು.

**(b)** ***i.*** ***ವಯಸ್ಸು*** **( 01.01.2021 ರಂತೆ)** **:**

| ಕ್ರ.ಸಂ. | ಹುದ್ದೆ | **ಗರಿಷ್ಠ ವಯೋಮಿತಿ (01.01.2021 ರಂತೆ)** |
|---|---|---|
| 1 | ಸಂರಕ್ಷಣೆ ಅಧಿಕಾರಿ | **೩೨ ವರ್ಷಗಳು** |
| 2 | ಸಹಾಯಕ ಸಂರಕ್ಷಣೆ ಅಧಿಕಾರಿ | **೪೦ ವರ್ಷಗಳು** |
| 3 | ಕನಿಷ್ಠ ಮೇಲ್ವಿಚಾರಕರು (ಸಂರಕ್ಷಣೆ) | **೪೩ ವರ್ಷಗಳು** |
| 4 | ಹವಿಲ್ದಾರ್ (ಸಂರಕ್ಷಣೆ) | **೪೩ ವರ್ಷಗಳು** |

ii. ನಿರ್ಧಾರಿತ ಗರಿಷ್ಠ ವಯೋಮಿತಿಯು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಅನ್ವಯಿಸುತ್ತದೆ.

iii. ಇ.ಹಿ.ವ. / ಪ.ಜಾ. / ಪ.ಪಂ. ಅಭ್ಯರ್ಥಿಗಳಿಗಾಗಿ ಹವಿಲ್ದಾರ್ (ಸಂರಕ್ಷಣೆ) ಹುದ್ದೆಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ –

| **ಕ್ರ.ಸಂ.** | **ವರ್ಗ** | **ವಯೋಮಿತಿಯಲ್ಲಿ ಸಡಿಲಿಕೆ** |
|---|---|---|
| 1 | ಇತರೆ ಹಿಂದುಳಿದ ವರ್ಗಗಳು (ಮೇಲ್ಪದರ ವರ್ಗ ರಹಿತ ) | ೩ ವರ್ಷಗಳು |
| 2 | ಪ.ಜಾ./ಪ.ಪಂ. | ೫ ವರ್ಷಗಳು |

iv. ಹವಿಲ್ದಾರ್ (ಸಂರಕ್ಷಣೆ) ಹುದ್ದೆಗಳಿಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ಅಪೇಕ್ಷಿಸುವವರು, ಅರ್ಜಿಯ ಜೊತೆಗೆ ಆವಶ್ಯಕ ಪ್ರಮಾಣಪತ್ರ (ಗಳು) ದ ಪ್ರತಿಯನ್ನು ಲಗತ್ತಿಸಿ ಮತ್ತು ಭೌತಿಕ ಪರೀಕ್ಷೆ / ಲಿಖಿತ ಪರೀಕ್ಷೆಯ ಸಮಯದಲ್ಲಿ ಮತ್ತು ಪರಿಶೀಲನೆಯ ಯಾವುದೇ ಹಂತದಲ್ಲಿ ಮೂಲ ಪ್ರತಿಯೊಂದಿಗೆ ಸಲ್ಲಿಸತಕ್ಕದ್ದು

v. ಇ.ಡಬ್ಲ್ಯೂ ಎಸ್ / ಜಾತಿ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಬಿ.ಇ.ಎಲ್. ವೆಬ್ ಸೈಟ್ (www.bel-india.in) ನಲ್ಲಿ ಲಭ್ಯವಿರುವ ನಮೂನೆಯಲ್ಲಿ ಇರತಕ್ಕದ್ದು, ತಪ್ಪಿದ್ದಲ್ಲಿ, ಅಭ್ಯರ್ಥಿಗಳು ಸಾಮಾನ್ಯ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಅರ್ಹತೆಗಳನ್ನು ಪೂರೈಸಿದ್ದಲ್ಲಿ ಮಾತ್ರ 'ಸಾಮಾನ್ಯ' ವರ್ಗದ ಅಡಿಯಲ್ಲಿ ಪರಿಗಣಿಸಲಾಗುವುದು.

**(c) ಶೈಕ್ಷಣಿಕ ವಿದ್ಯಾರ್ಹತೆ -**

i. ಹುದ್ದೆಗಳು- ೧ (ಪುಟ೧)ರಲ್ಲಿ ನೀಡಿದ ಎಲ್ಲಾ ಶೈಕ್ಷಣಿಕ ವಿದ್ಯಾರ್ಹತೆಗಳು, ಕಾಲಂ (೩) ವಿದ್ಯಾರ್ಹತೆಯು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಡೆದಿರತಕ್ಕದ್ದು.

ii. ಅಭ್ಯರ್ಥಿಯು ಊರ್ಜಿತ ಅಂಕ ಪತ್ರಗಳು / ಪ್ರಮಾಣ ಪತ್ರ ಪತ್ರ(ಕಾನ್ವೊಕೇಶನ್ ಪ್ರಮಾನಪತ್ರ) ವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

iii. ಒಂದು ವೇಳೆ ಕನಿಷ್ಠ ಅಗತ್ಯ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಅಪೇಕ್ಷಿಸಲಾದ ಅರ್ಹತೆ ಪದವಿಯಲ್ಲಿ ಪರಿಣತದ ಬಗ್ಗೆ ಉಲ್ಲೇಖವಾಗದಿದ್ದ ಪಕ್ಷದಲ್ಲಿ ಅಭ್ಯರ್ಥಿಗಳು ಅರ್ಜಿಯ ಜೊತೆಗೆ ವಿಶ್ವವಿದ್ಯಾಲಯ /ಸಂಸ್ಥೆ / ಕಾಲೇಜಿನಿಂದ ಪ್ರಮಾಣಪತ್ರದ ಪ್ರತಿಯನ್ನು ಲಗತ್ತಿಸಿ ಮತ್ತು ಮೂಲ ಪ್ರತಿಯನ್ನು ಅದರಲ್ಲಿ ಅರ್ಹತೆ ಪದಿವಿಯಲ್ಲಿ ತಮ್ಮ ಪರಿಣತವನ್ನು ಸ್ಪಷ್ಟವಾಗಿ ಉಲ್ಲೇಖ ಹೊಂದಿದ್ದು ಪ್ರತಿಗಳೊಂದಿಗೆ ಅದನ್ನು ನೇರ ಸಂದರ್ಶನ ಮತ್ತು / ಅಥವಾ ಪರಿಶೀಲನೆ ಪ್ರಕ್ರಿಯ ಯಾವುದೇ ಹಂತದಲ್ಲಿ ಸಲ್ಲಿಸತಕ್ಕದ್ದು.

iv. ಕನಿಷ್ಠ ಶೇಕಡವಾಗು ಅಂಕಗಳು -

| ಕ್ರ.ಸಂ. | ಹುದ್ದೆ | ಕನಿಷ್ಠ ಶೇಕಡವಾಗು ಅಂಕಗಳು / ಶ್ರೇಣಿ |
|---|---|---|
| 01 | ಸಂರಕ್ಷಣೆ ಅಧಿಕಾರಿ | ಉತ್ತೀರ್ಣ ಶ್ರೇಣಿ |
| 02 | ಸಹಾಯಕ ಸಂರಕ್ಷಣೆ ಅಧಿಕಾರಿ | ಉತ್ತೀರ್ಣ ಶ್ರೇಣಿ |
| 03 | ಕನಿಷ್ಠ ಮೇಲ್ವಿಚಾರಕರು (ಸಂರಕ್ಷಣೆ) | ಉತ್ತೀರ್ಣ ಶ್ರೇಣಿ |
| 04 | ಹವಿಲ್ದಾರ್ (ಸಂರಕ್ಷಣೆ) | ಉತ್ತೀರ್ಣ ಶ್ರೇಣಿ |

**(d) ಅನುಭವ -** ಸಂರಕ್ಷಣಾ ಹವಿಲ್ದಾರ್ ಮತ್ತು ಕನಿಷ್ಠ ಮೇಲ್ವಿಚಾರಕರು ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ೧-ಹುದ್ದೆಗಳು (ಪುಟ೧), ಕಾಲಂ ೪ ರಲ್ಲಿ ಉಲ್ಲೇಖಿಸಿದ ಅಪೇಕ್ಷಿತ ಒಟ್ಟು ವರ್ಷಗಳ ಅನುಭವವನ್ನು ಹೊಂದಿರತಕ್ಕದ್ದು.

i. ಗರಿಷ್ಠ ಸ್ವೀಕಾರ್ಹ ಅನುಭವವನ್ನು ನಿರ್ಣಹಿಸಲು ನಿರ್ಧಾರಿತ ದಿನಾಂಕ ೦೧.೦೧.೨೦೨೧ ಆಗಿರುತ್ತದೆ.

ii. ಅಭ್ಯರ್ಥಿಯು ಹಿಂದಿನ ಮತ್ತು ಪ್ರಸಕ್ತ ನೇಮಕಗಾರರಿಂದ ವಿತರಿಸಿದ ಅನುಭವ ಪ್ರಮಾಣಪತ್ರಗಳು / ಕಾರ್ಯ ಮುಕ್ತಿ ಪ್ರಮಾಣಪತ್ರಗಳು / ದಾಖಲೆಗಳನ್ನು ಅದರಲ್ಲಿ ಉದ್ಯೋಗದ ಅವಧಿ ಮತ್ತು ಪಡೆದಿರುವ ಹುದ್ದೆಯನ್ನು ಸ್ಪಷ್ಟವಾಗಿ ಉಲ್ಲೇಖವಾದಂತೆ ಹೊಂದಿರತಕ್ಕದ್ದು.

iii. ಕನಿಷ್ಠ ಮೇಲ್ವಿಚಾರಕರು / ಹವಿಲ್ದಾರ್ ಹುದ್ದೆಗೆ, ಜಿಲ್ಲಾ ಸೈನ್ಕ್ ವೆಲ್ ಫೇರ್ ಬೋರ್ಡ್ ನಲ್ಲ್ ನೋಂದಣೀಕರಣ ಕಡ್ಡಾಯ.

iv. ವೆಬ್ ಅರ್ಜಿ ಸಮೂನೆಯಲ್ಲಿ ಅಭ್ಯರ್ಥಿಗಳು ತಾವು ಸಲ್ಲಿಸಿದ ಸೇವೆಯನ್ನು ದಿನಾಂಕ ಮತ್ತು ಸ್ಥಾನದೊಂದಿಗೆ ಕೇವಲ ಅಂತಿಮವಾಗಿ / ಇತ್ತೀಚೆಗೆ ನಿಯುಕ್ತಿಗೊಂಡದ್ದನ್ನು ಸೆಕ್ಷನ್ ಯೂನಿಟ್ಸ್ ನಲ್ಲಿ ಸೂಚಿಸತಕ್ಕದ್ದು.

v. ವೆಬ್ ಅರ್ಜಿ ಸಮೂನೆಯಲ್ಲಿ ಅಭ್ಯರ್ಥಿಗಳು ತಾವು ಕೇವಲ ಅಂತಿಮವಾಗಿ / ಇತ್ತೀಚಿನ ಅಧ್ಯಯನ / ಕ್ಯಾಡರ್ / ಪುನರ್ವಸತಿ ಅಧ್ಯಯನ ಮಾಡಿದ್ದನ್ನು ಸೂಚಿಸತಕ್ಕದ್ದು.

**III** **ಆಯ್ಕೆಯ ವಿಧಾನ -** ಮಾನದಂಡವನ್ನು ಪೂರೈಸುವ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಗಾಗಿ ಲಘು ಸೂಚಿ ತಯಾರಿಸಲಾಗುವುದು. ಆಯ್ಕೆ ಪ್ರಕ್ರಿಯೆಯು -

- **ಸಂರಕ್ಷಣಾ ಅಧಿಕಾರಿ ಮತ್ತು ಸಹಾಯಕ ಸಂರಕ್ಷಣಾ ಅಧಿಕಾರಿ -**

ಅರ್ಹ ಅಭ್ಯರ್ಥಿಗಳನ್ನು ೮೫ ಅಂಕಗಳಿಗಾಗಿ ಲಿಖಿತ ಪರೀಕ್ಷೆಗೆ ಕರೆಯಲಾಗುವುದು ಮತ್ತು ಇದರಲ್ಲಿ ಉತ್ತೀರ್ಣರಾದವರನ್ನು ೧೫ ಅಂಕಗಳಿಗಾಗಿ ನೇರ ಸಂದರ್ಶನಕ್ಕೆ ಲಘು ಸೂಚಿ ತಯಾರಿಸಲಾಗುವುದು.

- **ಕನಿಷ್ಠ ಮೇಲ್ವಿಚಾರಕರು (ಸಂರಕ್ಷಣೆ) – ಪುರುಷ ಮತ್ತು ಹವಿಲ್ದಾರ್ (ಸಂರಕ್ಷಣೆ) – ಪುರುಷ ;-**

ಅರ್ಹ ಅಭ್ಯರ್ಥಿಗಳು ೫೦ ಅಂಕಗಳಿಗಾಗಿ ಭೌತಿಕ ಸಾಮರ್ಥ್ಯ / ಕೌಶಲ ಪರೀಕ್ಷೆಗೆ ಒಳಗಾಗತಕ್ಕದ್ದು ಮತ್ತು ಇದರಲ್ಲಿ ತೇರ್ಗಡೆಯಾದವರನ್ನು ೧೦೦ ಅಂಕಗಳಿಗಾಗಿ ಲಿಖಿತ ಪರೀಕ್ಷೆಗೆ ಲಘು ಸೂಚಿ ತಯಾರಿಸಲಾಗುವುದು. ಭೌತಿಕ ಸಾಮರ್ಥ್ಯ / ಕೌಶಲ ಪರೀಕ್ಷೆ ಮತ್ತು ಲಿಖಿತ ಪರೀಕ್ಷೆಯು ಬೆಂಗಳೂರಿನಲ್ಲಿ ಮಾತ್ರ ನಡೆಸಲಾಗುವುದು.

**IV** **ವೇತನ ಮತ್ತು ಭತ್ಯೆಗಳು –** ಆಯ್ಕೆಯಾದ ಅಭ್ಯರ್ಥಿಗಳನ್ನು ಹುದ್ದೆ-೧ (ಪುಟ೧) ಕಾಲಂ ೭ ರಲ್ಲಿ ಉಲ್ಲೇಖಿಸಿದಂತೆ ವೇತನ ಶ್ರೇಣಿಯಲ್ಲಿ ನೇಮಕ ಮಾಡಲಾಗುವುದು. ಮೂಲ ವೇತನದ ಜೊತೆಗೆ ಇತರೆ ಭತ್ಯೆಗಳಾದ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ವಾರ್ಷಿಕ ಮೂಲ ವೇತನದಲ್ಲಿ ಶೇಕಡ ೩೫ ರ ದರದಲ್ಲಿ ಸವಲತ್ತುಗಳು ( ಸಂರಕ್ಷಣ ಅಧಿಕಾರಿ / ಸಹಾಯಕ್ ಸಂರಕ್ಷಣ ಅಧಿಕಾರಿ ಗಾಗಿ ) ಮತ್ತು ಶೇಕಡ ೩೦ (ಕನಿಷ್ಠ ಮೇಲ್ವಿಚಾರಕರು / ಹವಿಲ್ದಾರ್ ಗಾಗಿ ), ವೈದ್ಯಕೀಯ ಖರ್ಚು ಮರುಪಾವತಿ, ಗುಂಪು ವಿಮೆ, ಭವಿಷ್ಯ ನಿಧಿ, ಪಿಂಚಣಿ, ಗ್ರಾಚ್ಯುಟಿ ಇತ್ಯಾದಿ ಕಂಪನಿ ನಿಯಮಗಳನುಸಾರ ವೇತನ ಪ್ಯಾಕೇಜ್ ನ ಭಾಗವಾಗಿ ಇರುವುದು.



BHARAT ELECTRONICS

QUALITY. TECHNOLOGY. INNOVATION

**V ಅರ್ಜಿ ಸಲ್ಲಿಸುವುದು ಹೇಗೆ :**

(a) ಮೇಲೆ ತಿಳಿಸಲಾದ ಮಾನದಂಡವನ್ನು ಪೂರೈಸುವ ಅಭ್ಯರ್ಥಿಗಳು ಆನ್ ಲೈನ್ ನಲ್ಲಿ ಅರ್ಜಿ ನಮೂನೆಯನ್ನು ಭರ್ತಿ ಭರ್ತಿ ಮಾಡಬಹುದಾಗಿದೆ. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಆನ್ ಲೈನ್ ಅರ್ಜಿಯನ್ನು ಹೇಗೆ ಭರ್ತಿ ಮಾಡಬೇಕು ಎಂಬ ಸೂಚನೆಗಳನ್ನು ದಯವಿಟ್ಟು ಗಮನಿಸತಕ್ಕದ್ದು. ಮುದ್ರಿತ / ಕಾಗದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(b) ಅರ್ಜಿಗಳೊಂದಿಗೆ ಈ ಕೆಳಕಂಡ ಸ್ಕ್ಯಾನ್ ಮಾಡಲಾದ ಸ್ವಪ್ರಮಾಣಿತ ದಾಖಲೆಗಳು ಹೊಂದಿರತಕ್ಕದ್ದು.

1) ಇತ್ತೀಚಿನ ವರ್ಣ ಪಾಸ್ ಪೋರ್ಟ್ ಆಕಾರ ಫೋಟೊ

2) ಎಸ್ ಎಸ್ ಎಲ್ ಸಿ / ಎಸ್ ಎಸ್ ಸಿ / ಐ ಎಸ್ ಸಿ ಅಂಕ ಪಟ್ಟಿ ಮತ್ತು ಜನ್ಮ ದಿನಾಂಕಕ್ಕೆ ಸಾಕ್ಷ್ಯವಾಗಿ ಯಾವುದೇ ಇತರೆ ಊರ್ಜಿತ ದಾಖಲೆ.

3) ಪ.ಜಾ./ಪ.ಪಂ./ಇ.ಹಿ.ವ. / ಇ ಡಬ್ಲ್ಯೂ ಎಸ್ ಗೆ ಸಂಬಂಧಿಸಿದ ಅಭ್ಯರ್ಥಿಗಳು ನಿರ್ಧಾರಿತ ನಮೂನೆಯಲ್ಲಿ ತಮ್ಮ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

4) ಇ.ಹಿ.ವ. ವರ್ಗಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ದಿನಾಂಕ ೦೧.೦೧.೨೦೨೦ ರಂದು ಅಥವಾ ನಂತರ ನಿರ್ಧಾರಿತ ನಮೂನೆಯಲ್ಲಿ ಸಕ್ಷಮ ಅಧಿಕಾರಿ* ಅವರಿಂದ ವಿತರಿಸಿದ ಸಮುದಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕು ಮತ್ತು ೨೦೧೯-೨೦ ಸಾಲಿಗೆ ಸಕ್ಷಮ ಅಧಿಕಾರಿ* ಅವರಿಂದ ವಿತರಿಸಿದ ಇ ಡಬ್ಲ್ಯೂ ಎಸ್ ಪ್ರಮಾಣಪತ್ರವನ್ನು ಸ್ವೀಕರಿಸಲಾಗುವುದು.(ನಿರ್ಧಾರಿತ ನಮೂನೆಗಳನ್ನು ವೆಬ್ ಸೈಟ್ www.bel-india.in ನಲ್ಲಿ ಒದಗಿಸಲಾಗಿದೆ.

5) ಪ್ರಸಕ್ತ ನೇಮಕಗಾರರಿಂದ ಆಕ್ಷೇಪಣೆರಹಿತ ಪ್ರಮಾಣಪತ್ರ (ಸರ್ಕಾರಿ / ಅರೆ ಸರ್ಕಾರಿ/ಸಾರ್ವಜನಿಕ ಉದ್ಯಮದಲ್ಲಿ ಉದ್ಯೋಗಿಯಾರಿದ್ದರೆ) ಅನ್ವಸಿದಲ್ಲಿ

6) ವಿಶ್ವವಿದ್ಯಾಲಯ / ಸಂಸ್ಥೆಯ ಮೂಲಕ ಸಿ.ಜಿ.ಪಿ.ಎ. ನಿಂದ ಶೇಕಡವಾರುಗೆ ಪರಿವರ್ತನೆ ಮಾಡಲು ಅಳವಡಿಸಿಕೊಂಡ ನಿಯಮಗಳ ಪುರಾವೆ, ಯಾವುದೇ ಇದ್ದಲ್ಲಿ .

7) ಪ್ರತಿ ಶೈಕ್ಷಣಿಕ ವರ್ಷ/ ಸೆಮಿಸ್ಟರ್ ಅಂಕ ಪತ್ರ / ಪಟ್ಟಿ

8) ಅನುಭವ ಪ್ರಮಾಣ ಪತ್ರ, ಡಿಸ್ ಚಾರ್ಜ್ ಪ್ರಮಾಣ ಪತ್ರ, ಅನ್ವಯಿಸಿದ್ದಲ್ಲಿ. ಭಾರತೀಯ ಸಶಸ್ತ್ರ ಬಲ / ಸಂಬಂಧಿತ ಅಧಿಕಾರಿಯವರಿಂದ ವೈದ್ಯಕೀಯ ವರ್ಗ, ಕಾರ್ಯಮುಕ್ತಿ ದಿನಾಂಕ ಮತ್ತು ಆದರ್ಶ ಮಾದರಿ - ಶೇಪ್ ೧ ನಮೂದನೆಯೊಂದಿಗೆ ವಿತರಿಸಿದ ಡಿಸ್ ಚಾರ್ಜ್ ಪುಸ್ತಕ.

9) ಅಭ್ಯರ್ಥಿಗಳು ಪ್ರಸ್ತುತದಲ್ಲಿ ಸಶಸ್ತ್ರ ಬಲ / ಸಿ ಎ ಪಿ ಎಫ್ ಗಳಲ್ಲಿ ಸೇವೆ ಸಲ್ಲಿಸುತ್ತಿದ್ದರೆ ಮತ್ತು ಡಿಸ್ ಚಾರ್ಜ್ ಆಗದಿದ್ದರೆ, ತಮ್ಮ ವೈದ್ಯಕೀಯ ವರ್ಗ, ನಡತೆ ಮತ್ತು ಡಿಸ್ ಚಾರ್ಜ್ ಮಾಡುವ ಸಂಭಾವಿತ ದಿನಾಂಕದ ಪುರಾವೆಯಾಗಿ ದಾಖಲೆಗಳನ್ನು ಸಲ್ಲಿಸತಕ್ಕದ್ದು.

10) ಜಿಲ್ಲಾ ಸೈನಿಕ್ ವೆಲ್ ಫೇರ್ ಬೋರ್ಡ್ ನಿಂದ ನೋಂದಣೀಕರನ ಸಂಖ್ಯೆ ಮತ್ತು ಅದರ ಪ್ರತಿ (ಸಂರಕ್ಷಣೆ ಹುದ್ದೆಗಳು - ಕನಿಷ್ಠ ಮೇಲ್ವಿಚಾರಕರು ಮತ್ತು ಹವಿಲ್ದಾರ್ ಗೆ ಮಾತ್ರ)

**VI ಸಾಮಾನ್ಯ ಸೂಚನೆಗಳು -**

1) ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸುವ ಮುನ್ನ ಜಾಹೀರಾತಿನಲ್ಲಿ ತಿಳಿಸಿದ ಅರ್ಹತೆ ಮಾನದಂಡಗಳು ಪೂರೈಸಿರುವುದನ್ನು ಖಾತರಿಗೊಳಿಸತಕ್ಕದ್ದು.

2) ಕೇವಲ ಭಾರತೀಯ ನಾಗರೀಕರು ಅರ್ಜಿ ಸಲ್ಲಿಸತಕ್ಕದ್ದು.

3) ಕನಿಷ್ಠ ಮೇಲ್ವಿಚಾರಕರು (ಸಂರಕ್ಷಣೆ) ಮತ್ತು ಹವಿಲ್ದಾರ್ (ಸಂರಕ್ಷಣೆ) ಹುದ್ದೆಗಳಿಗೆ ಕನ್ನಡ ಭಾಷೆಯ ಅರಿವು ಅಗತ್ಯ.

4. ಸರ್ಕಾರಿ / ಅರೆ ಸರ್ಕಾರಿ / ಸಾರ್ವಜನಿಕ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು " ಆಕ್ಷೇಪಣೆರಹಿತ ಪ್ರಮಾಣಪತ್ರ " ವನ್ನು ದಾಖಲೆಗಳ ಪರಿಶೀಲನೆ ಸಮಯದಲ್ಲಿ ( ಕೌಶಲ ಪರೀಕ್ಷೆ / ಭೌತಿಕ ಸಾಮರ್ಥ್ಯ ಪರೀಕ್ಷೆ / ಲಿಖಿತ ಪರೀಕ್ಷೆ / ನೇರ ಸಂದರ್ಶನ ) ಸಲ್ಲಿಸತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಇದನ್ನು ಸಲ್ಲಿಸಲು ವಿಫಲವಾದಲ್ಲಿ ಆತ / ಆಕೆಯ ಅಭ್ಯರ್ಥಿತನವು ಅನರ್ಹಗೊಳಿಸಲಾಗುವುದು.
5. ಎಲ್ಲಾ ಅರ್ಹ ವಿದ್ಯಾರ್ಹತೆಯು ಮಾನ್ಯತೆ ಪಡೆದ ಸಂಸ್ಥೆ / ಮಂಡಲಿ / ಪರಿಷತ್ತು / ವಿಶ್ವವಿದ್ಯಲಯದಿಂದ ಹೊಂದಿರತಕ್ಕದ್ದು. ಪದವಿ / ಡಿಪ್ಲೊಮಾ ಪಡೆಯುವಾಗ ಎಲ್ಲೆಲ್ಲಿ ಸಿಜಿಪಿಎ/ಒಜಿಪಿಎ/ಡಿಜಿಪಿಎ ಅಥವಾ ಲೆಟರ್ ಗ್ರೇಡ್ ಉಲ್ಲೇಖವಾಗಿದೆಯೋ ಅದರ ಸಮಾನಾಂತರ ಶೇಕಡವಾರು ಅಂಕಗಳನ್ನು ವಿಶ್ವವಿದ್ಯಾಲಯ/ ಸಂಸ್ಥೆಯು ಅಳವಡಿಸಿಕೊಂಡ ನಿಯಮಗಳನುಸಾರವಾಗಿ ಅರ್ಜಿ ನಮೂನೆಯಲ್ಲಿ ಅದನ್ನು ಸೂಚಿಸತಕ್ಕದ್ದು. ಸಿಜಿಪಿಎ/ಒಜಿಪಿಎ/ಡಿಜಿಪಿಎ ನಿಂದ ಶೇಕಡವಾರುವಾಗಿ ಪರಿವರ್ತನೆ ಮಾಡಲು ವಿಶ್ವವಿದ್ಯಾಲಯ/ ಸಂಸ್ಥೆಯು ಅಳವಡಿಸಿಕೊಂಡ ನಿಯಮಗಳ ಸಾಕ್ಷ್ಯವನ್ನು ಪರಿಶೀಲನೆಯ ಸಮಯದಲ್ಲಿ ಪ್ರಸ್ತುತಪಡಿಸತಕ್ಕದ್ದು.
6. ಅಭ್ಯರ್ಥಿಗಳು ಊರ್ಜಿತ ಫೋಟೊ ಗುರುತಿನ ಸಕ್ಷ್ಯವನ್ನು ಕೌಶಲ ಪರೀಕ್ಷೆ / ಲಿಖಿತಪರೀಕ್ಷೆ ಗೆ ಹಾಜರಾಗುವಾಗ ಪ್ರಸ್ತುತಪಡಿಸಬೇಕು. ಪ್ರವಾಸ ಭತ್ಯೆ ಕೋರುವ ಪ.ಜಾ./ಪ.ಪಂ. ಅಭ್ಯರ್ಥಿಗಳು ಜಾತಿ / ಅಸಮರ್ಥ ಪ್ರಮಾಣಪತ್ರ ವನ್ನು ಪ್ರಸ್ತುತಪಡಿಸಿ ಮತ್ತು ಅದರ ಪ್ರತಿಯನ್ನು ರೈಲು/ ಬಸ್ ಟಿಕೆಟ್ ಗಳ ಜೊತೆಗೆ ಸಲ್ಲಿಸತಕ್ಕದ್ದು
7. ಅಭ್ಯರ್ಥಿಯು ಆರೋಗ್ಯವಂತರಾಗಿರತಕ್ಕದ್ದು. ಅನಾರೋಗ್ಯಕ್ಕೆ ಯಾವುದೇ ಸಡಿಲಿಕೆಯನ್ನು ನೀಡಲಾಗುವುದಿಲ್ಲ. ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯು ನಿಯಮಗಳು ಮತ್ತು ವೈದ್ಯಕೀಯ ಆರೋಗ್ಯದ ಮಾನಕದ ಅನುಸಾರವಾಗಿ ನಿರ್ವಹಿಸುವ ಪೂರ್ವ ನೇಮಕಾತಿ ವೈದ್ಯಕೀಯ ಪರೀಕ್ಷೆಯಲ್ಲಿ ವೈದ್ಯಕೀಯವಾಗಿ ಆರೋಗ್ಯವಂತ ಎಂಬುದುರ ಮೇಲೆ ಅವಲಂಬಿತವಾಗಿರುತ್ತಾರೆ**.**
8. ಅಭ್ಯರ್ಥಿಗಳು 'ಆದರ್ಶ' ನಮೂದು ಮತ್ತು ವೈದ್ಯಕೀಯ ವರ್ಗದಲ್ಲಿ AYE' and SHAPE-I ನ್ನು (ಕನಿಷ್ಠ ಮೇಲ್ವಿಚಾರಕರು (ಸಂರಕ್ಷಣೆ) ಮತ್ತು ಹವಿಲ್ದಾರ್ (ಸಂರಕ್ಷಣೆ) ಹುದ್ದೆಗಳಿಗೆ ಹೊಂದಿರತಕ್ಕದ್ದು. ಅಗ್ನಿ ತರಬೇತಿಯು ಅಪೇಕ್ಷಣೀಯ.
9. ಬೆಂಗಳೂರು ನಿವಾಸಿಗಳಲ್ಲದ ಎಲ್ಲಾ ಅಭ್ಯರ್ಥಿಗಳನ್ನು ( ಸಂರಕ್ಷಣೆ ಅಧಿಕಾರಿ / ಸಹಾಯಕ ಸಂರಕ್ಷಣೆ ಅಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸುವ) ನೇರಸಂದರ್ಶನಕ್ಕೆ ಕರೆದಾಗ ಮತ್ತು ಬೆಂಗಳೂರು ನಿವಾಸಿಗಳಲ್ಲದ ಪ.ಜಾ/ಪ.ಪಂ./ಪಿ ಡಬ್ಲ್ಯು ಡಿ ಅಭ್ಯರ್ಥಿಗಳನ್ನು [ಕನಿಷ್ಠ ಮೇಲ್ವಿಚಾರಕರು (ಸಂರಕ್ಷಣೆ) ಮತ್ತು ಹವಿಲ್ದಾರ್ (ಸಂರಕ್ಷಣೆ)] ಭೌತಿಕ ಸಾಮರ್ಥ್ಯ ಪರೀಕ್ಷೆ / ಕೌಶಲ / ಲಿಖಿತ ಪರೀಕ್ಷೆಗೆ ಹಾಜರಾಗಲು ಪ್ರವಾಸ ಭತ್ಯೆಯನ್ನು ತಮ್ಮ ಅಂಚೆ ವಿಳಾಸ / ಭಾರತದಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಯ ಸ್ಥಳದಿಂದ ಬರುವ/ತೆರಳುವ ಪ್ರವಾಸ ಮಾರ್ಗದ ಹತ್ತಿರ ಮಾರ್ಗಕ್ಕೆ (ಸ್ಲೀಪರ್ ಶ್ರೇಣಿ) ಪ್ರವಾಸ ಮಾಡಿದ ಟಿಕೆಟ್ ಗಳನ್ನು ಪ್ರಸ್ತುತಪಡಿಸಿದ್ದಲ್ಲಿ ಅದನ್ನು ಮರುಪಾವತಿಸಲಾಗುವುದು. ಅಭ್ಯರ್ಥಿಗಳಿಂದ ಸಲ್ಲಿಸಲಾದ ಸಂಬಂಧಿತ ದಾಖಲೆಗಳ ಪರಿಶೀಲನೆ ನಂತರ ಪ್ರವಾಸ ಭತ್ಯೆಯನ್ನು ಮರು ಪಾವತಿ ಮಾಡುವ ಸಲುವಾಗಿ ಆನ್ ಲೈನ್ ಅರ್ಜಿಯಲ್ಲಿ ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸಬೇಕೆಂಬುದನ್ನು ಅಭ್ಯರ್ಥಿಗಳು ಗಮನಿಸತಕ್ಕದ್ದು. ಇ ಸಿ ಎಸ್ ಮೂಲಕ ನಂತರದ ದಿನಾಂಕದಲ್ಲಿ ಮರುಪಾವತಿಯನ್ನು ಮಾಡಲಾಗುವುದು.
10. ಸ್ಥಳೀಯ ಪ್ರಯಾಣ ಖರ್ಚು, ಯಾವುದೇ ಇದ್ದಲ್ಲಿ ಅಭ್ಯರ್ಥಿಗಳೇ ಭರಿಸತಕ್ಕದ್ದು.
11. ಆನ್ ಲೈನ್ ಅರ್ಜಿಯಲ್ಲಿ ಒಮ್ಮೆ ಘೋಷಿಸಿದ ವರ್ಗ (ಸಾಮಾನ್ಯ/ ಪಜಾ/ಪ ಪಂ/ಇ.ಹಿ.ವರ್ಗ/ಇ. ಡಬ್ಲ್ಯು.ಎಸ್) ಕ್ಕೆ ಸಂಬಂಧ ಪಟ್ಟಂತೆ ಬದಲಾವಣೆಗೆ ಕೋರಲು ಅವಕಾಶ ಇರುವುದಿಲ್ಲ.
12. ***ಇ.ಹಿ.ವ ಮೇಲ್ಪದರ ರಹಿತ (ಎನ್ ಸಿ ಎಲ್) ಅಭ್ಯರ್ಥಿಗಳಿಗೆ ಮೀಸಲಾತಿ / ಸಡಿಲಿಕೆ / ರಿಯಾಯಿತಿಯು*** ದಸ್ತಾವೇಜು ಪರಿಶೀಲನೆಯ ಸಮಯದಲ್ಲಿ ಸಕ್ಷಮ ಅಧಿಕಾರಿಯವರಿಂದ ಜಾರಿಯಾದ " ಕೇಂದ್ರ ಸರ್ಕಾರ ಹುದ್ದೆಗಳಲ್ಲಿ ನೇಮಕಾತಿ " * ಗಾಗಿ ಭಾರತ ಸರ್ಕಾರ ದಿಂದ ನಿರ್ಧರಿಸಿದ ನಮೂನೆಯಲ್ಲಿ ಘೋಷಣೆಯ ಜೊತೆಗೆ ಪ್ರಮಾಣೀಕೃತ ಇ.ಹಿ.ವ (ಎನ್ ಸಿ ಎಲ್) ಪ್ರಮಾಣಪತ್ರದ ಪ್ರತಿಯನ್ನು ಸಲ್ಲಿಸುವುದರ ಮೇಲೆ ಅವಲಂಬಿತವಾಗಿರುತ್ತದೆ. ಆದಾಯ ಪ್ರಮಾಣಪತ್ರವನ್ನು ಇ.ಹಿ.ವ ಪ್ರಮಾಣಪತ್ರವನ್ನಾಗಿ ಪರಿಗಣಿಸಲಾಗುವುದಿಲ್ಲ.



13. ಸಕ್ಷಮ ಪ್ರಾಧಿಕಾರದಿಂದ 2019 - 20 ನೇ ವರ್ಷಕ್ಕೆ ಜಾರಿಯಾದ ಇ.ಡಬ್ಲ್ಯು.ಎಸ್ ಪ್ರಮಾಣ ಪತ್ರ* ವನ್ನು ಪರಿಗಣಿಸಲಾಗುವುದು. (ವೆಬ್ ಸೈಟ್ www.bel-india.in ನಲ್ಲಿ ನಿರ್ಧಾರಿತ ಪ್ರಪತ್ರಗಳು ಲಭ್ಯವಿದೆ).

14. ಯಾವುದೇ ಅಭ್ಯರ್ಥಿಯು ತನ್ನ ಹಿಂದಿನ ಉದ್ಯೋಗದಾತರ ಬಳಿ ಕಾನೂನು ವ್ಯಾಜ್ಯವಿದ್ದಲ್ಲಿ ಆನ್ ಲೈನ್ ಅರ್ಜಿಯಲ್ಲಿ ಅದನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

15. ಅಪೂರ್ಣವಾದ ಮತ್ತು ನಿಗದಿತ ಪ್ರಪತ್ರದಲ್ಲಿ ಇಲ್ಲದ, ಅಗತ್ಯ ಅಡಕಗಳಿಲ್ಲದ ಆನ್ ಲೈನ್ ಅರ್ಜಿ ನಮೂನೆಗಳನ್ನು ಯಾವುದೇ ಕಾರಣ ತಿಳಿಸದೆ ಒಮ್ಮೆಲೆ ತಿರಸ್ಕರಿಸಲಾಗುವುದು ಮತ್ತು ಈ ಸಂಬಂಧವಾಗಿ ಯಾವುದೇ ಪತ್ರ ವ್ಯವಹಾರವನ್ನು ಅಂಗೀಕರಿಸಲಾಗುವುದಿಲ್ಲ.

16. ಅಭ್ಯರ್ಥಿಗಳು ಆನ್ ಲೈನ್ ಅರ್ಜಿ ನಮೂನೆಯಲ್ಲಿ ಸಕ್ರಿಯ ಹಾಗೂ ಮಾನ್ಯ ಇ-ಮೇಲ್ ಐ ಡಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ಭೌತಿಕ ದಕ್ಷತೆ / ಲಿಖಿತ ಪರೀಕ್ಷೆ / ನೇರ ಸಂದರ್ಶನಕ್ಕೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳನ್ನು ಅಭ್ಯರ್ಥಿಗಳಿಂದ ನೀಡಲ್ಪಟ್ಟ ಇ-ಮೇಲ್ ಗೆ ಕಳುಹಿಸಲಾಗುವುದು. ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗಳು ಇತರರ ಇ-ಮೇಲ್ ಅನ್ನು ನೀಡಬಾರದು. ಅಭ್ಯರ್ಥಿಗಳಿಗೆ ಕಳುಹಿಸಲಾದ ಯಾವುದೇ ಇ-ಮೇಲ್ ಬೌನ್ಸ್ ಆದ ಪಕ್ಷದಲ್ಲಿ ಬಿ.ಇ.ಎಲ್ ಜವಾಬ್ದಾರಿಯಾಗುವುದಿಲ್ಲ.

17. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಅರ್ಜಿಯನ್ನು ಸಲ್ಲಿಸುವಂತಿಲ್ಲ. ಅನೇಕ ಅರ್ಜಿಗಳನ್ನು ಸಲ್ಲಿಸಿದ ಸಂದರ್ಭದಲ್ಲಿ ಕೇವಲ ಕೊನೆಯ ಮಾನ್ಯ (ಪೂರ್ಣ) ಅರ್ಜಿಯನ್ನು ಪರಿಗಣಿಸಲಾಗುವುದು

18. ಆಯ್ಕೆಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಕಂಪನಿ ಒದಗಿಸುವ ವಸತಿ ಗೃಹದಲ್ಲಿ ನಿವಾಸಿಸತಕ್ಕದ್ದು.

19. ಅಭ್ಯರ್ಥಿಯ ಅರ್ಹತೆಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ, ಆ ಅರ್ಹತೆಯ ಬಗ್ಗೆ ಕೈಗೊಳ್ಳಲಾಗುವ ಪರಿಶೀಲನೆಯ ವಿವಿಧ ಹಂತಗಳಲ್ಲಿ, ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಯ ಪ್ರಮಾಣಗಳಲ್ಲಿ ಬಿ.ಇ.ಎಲ್ ನ ನಿರ್ಣಯವೇ ಅಂತಿಮ ಮತ್ತು ಅಭ್ಯರ್ಥಿಗಳು ಇದಕ್ಕೆ ಬದ್ಧರಾಗಿರುತ್ತಾರೆ.

20. ಆಯ್ಕೆ ಪ್ರಕ್ರಿಯೆಯ ಎಲ್ಲಾ ಹಂತದಲ್ಲಿ ಅಭ್ಯರ್ಥಿಯ ಅಭ್ಯರ್ಥಿತನವು ತಾತ್ಕಾಲಿಕವಾಗಿರುವುದು. ಕೇವಲ ವಿದ್ಯಾರ್ಹತೆ ಮತ್ತು ಅನುಭವದ ಕನಿಷ್ಠ ಮಾನದಂಡವನ್ನು ಪೂರೈಸಿದ್ದಲ್ಲಿ ಅವರನ್ನು ಭೌತಿಕ ದಕ್ಷತೆ / ಕೌಶಲ ಪರೀಕ್ಷೆ / ಲಿಖಿತ ಪರೀಕ್ಷೆ / ನೇರ ಸಂದರ್ಶನಕ್ಕೆ ಕರೆಯಲು ಅಭ್ಯರ್ಥಿಗಳು ಹಕ್ಕನ್ನು ಹೊಂದಿರುವುದಿಲ್ಲ.

21. ಬಿ.ಇ.ಎಲ್ ಆಡಳಿತವರ್ಗವು, ಆಯ್ಕೆ ಸಮಯದಲ್ಲಿ ಮೇಲೆ ತಿಳಿಸಿದ ವಾಸ್ತವಿಕ ಅಗತ್ಯದ ಆಧಾರದ ಮೇಲೆ ಯಾವುದೇ ಮಾನದಂಡ ( ರದ್ದು / ಪರಿವರ್ತನೆ / ಹೆಚ್ಚುವರಿ ), ಆಯ್ಕೆ ವಿಧಾನ, ಹುದ್ದೆಗಳ ಸಂಖ್ಯೆಯನ್ನು ಬದಲಾವಣೆ ಮಾಡಲು ಅಧಿಕಾರ ಹೊಂದಿರುತ್ತದೆ.

22. ಅಭ್ಯರ್ಥಿತನವು ಆಯ್ಕೆಯ ಪ್ರಕ್ರಿಯೆ ಅಥವಾ ನೇಮಕವಾದ ನಂತರ ಜಾಹೀರಾತಿನಲ್ಲಿ ಉಲ್ಲೇಖಿಸಿದ ಯಾವುದೇ ಮಾನಡಂಡಗಳನ್ನು ಪೂರೈಸದ ಮಾಹಿತಿಯನ್ನು ನೀಡಿದ ಅಭ್ಯರ್ಥಿಯನ್ನು ಯಾವುದೇ ಹಂತದಲ್ಲಿ ತಿರಸ್ಕರಿಸಲು ಜವಾಬ್ದಾರರಾಗಿರುತ್ತಾರೆ. ಅಭ್ಯರ್ಥಿತನವು ಒಂದು ವೇಳೆ ಬಿ ಇ ಎಲ್ ಗೆ ಯಾವುದೇ ಸಾಕ್ಷ್ಯ/ಗಮನಕ್ಕೆ ಅರ್ಜಿಯಲ್ಲಿ ಸೂಚಿಸಿದ ವಿದ್ಯಾರ್ಹತೆ, ಅನುಭವ ಮತ್ತು ಯಾವುದೇ ವಿವರಗಳು / ಇತರೆ ನಮೂನೆಗಳು / ಮಾನ್ಯತೆ ಇಲ್ಲದ ನಮೂನೆಗಳು / ಸುಳ್ಳು / ತಪ್ಪು ದಾರಿಗೆ ಎಳೆಯುವ ಮತ್ತು / ಮಾಹಿತಿಯನ್ನು ಮರೆಮಾಚುವ / ಬಿ ಇ ಎಲ್ ನ ಗಮನಕ್ಕೆ ತರಬೇಕಾಗುವಂತಹ ವಿವರಗಳು ಕಂಡು ಬಂದಲ್ಲಿ, ಯಾವುದೇ ಹಂತದಲ್ಲಿ ತಿರಸ್ಕಾರಕ್ಕೆ ಹೊಣೆಗಾರಿಕೆಯಾಗುವುದು.

23. ಯಾವುದೇ ರೀತಿಯ ಪ್ರಚಾರವು ಅನರ್ಹಕ್ಕೆ ಒಳಗಾಗುವುದು. ಯಾವುದೇ ಅಭ್ಯರ್ಥಿಯನ್ನು ಏನೇ ಕಾರಣವಿದ್ದರೂ ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಬಹಿಷ್ಕಾರ / ಅನರ್ಹ ಗೊಳಿಸಲು ಬಿ ಇ ಎಲ್ ಅಧಿಕಾರ ಹೊಂದಿರುತ್ತದೆ.

24. ಆಂಗ್ಲ ಭಾಷೆ ಹೊರತು ಪಡಿಸಿ ಈ ಜಾಹಿರಾತಿನ ಇತರೆ ಯಾವುದೇ ಆವೃತ್ತಿಗಳಲ್ಲಿ ಅರ್ಥ ವಿವರಣೆಯ ಕುರಿತು ವಿವಾದಗಳು ಉಂಟಾದರೆ, ಬಿ.ಇ.ಎಲ್ ವೆಬ್ ಸೈಟ್ ನಲ್ಲಿರುವ ಆಂಗ್ಲ ಆವೃತ್ತಿಯು ಚಾಲ್ತಿಯಲ್ಲಿರುತ್ತದೆ.

25. ಈ ಭರ್ತಿ ಪ್ರಕ್ರಿಯೆ ಒಳಗೊಂಡಂತೆ ಜಾಹೀರಾತಿನಿಂದ ಉಂಟಾಗುವ ವಿವಾದಗಳು ಬೆಂಗಳೂರಿನಲ್ಲಿರುವ ನ್ಯಾಯಾಲಯದ ಏಕಮಾತ್ರ ಅಧಿಕಾರ ಕ್ಷೇತ್ರಕ್ಕೆ ಒಳಪಟ್ಟಿರುತ್ತದೆ.

26. ಈ ನೇಮಕಾತಿಗೆ ಸಂಬಂಧಿಸಿದ ಎಲ್ಲಾ ಮುಂದಿನ ಪ್ರಕಟಣೆಗಳು / ವಿವರಗಳನ್ನು ಕಾಲಕಾಲಕ್ಕೆ ವೆಬ್ ಸೈಟ್ www.bel-india.in ನಲ್ಲಿ ಒದಗಿಸಲಾಗುವುದು.

ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 10.02.2021

ಜಾಹೀರಾತಿಗೆ ಮತ್ತು ಅರ್ಜಿ ಶುಲ್ಕ ಪಾವತಿಗೆ ಸಂಬಂಧಪಟ್ಟ ಪ್ರಶ್ನೆಗಳಿಗಾಗಿ belbgrec@bel.co.in ಗೆ ಇ-ಮೇಲ್ , ದೂರವಾಣಿ ಸಂಖ್ಯೆ.080-22195369 ಮುಖೇನ ನಮ್ಮನ್ನು ಸಂಪರ್ಕಿಸಿ.

ಆನ್ ಲೈನ್ ಮೂಲಕ ಅರ್ಜಿ ನಮೂನೆಯನ್ನು ಸಲ್ಲಿಸುವುದಕ್ಕೆ ಸಂಬಂಧಪಟ್ಟ ತಾಂತ್ರಿಕ ನೆರವಿಗಾಗಿ ದಯವಿಟ್ಟು cbtexamhelpdesk@gmail.com ಗೆ ಇ-ಮೇಲ್ ಮತ್ತು ಸಹಾಯ ಕೇಂದ್ರ ಸಂಖ್ಯೆ 8866678549 / 8866678559 ಮುಖೇನ ಸಂಪರ್ಕಿಸಿ.

---

* **ಟಿಪ್ಪಣಿ:** ಈ ಕೆಳಕಂಡ ಯಾವುದೇ ಪ್ರಾಧಿಕಾರಿಗಳಿಂದ ನಿರ್ಧಾರಿತ ಪ್ರಪತ್ರದಲ್ಲಿ ಜಾರಿಯಾಗಿರುವ ಇ.ಹಿ.ವರ್ಗದ ಪ್ರಮಾಣ ಪತ್ರ (ಮೇಲ್ಪದರ ವರ್ಗ ರಹಿತ) ಮತ್ತು ಇ.ಡಬ್ಲ್ಯು.ಎಸ್ ಗೆ ಆದಾಯ ಮತ್ತು ಆಸ್ತಿ ಪ್ರಮಾಣ ಪತ್ರವು ಇ.ಹಿ.ವ/ ಇ.ಡಬ್ಲ್ಯು.ಎಸ್ ವರ್ಗದ ಅಭ್ಯರ್ಥಿಗಳ ಪ್ರಮಾಣವಾಗಿ ಸ್ವೀಕರಿಸಲಾಗುತ್ತದೆ.

*i.* ಜಿಲ್ಲಾ ಮ್ಯಾಜಿ ಸ್ಟ್ರೇಟ್ / ಪೂರಕ ಜಿಲ್ಲಾ ಮ್ಯಾಜಿ ಸ್ಟ್ರೇಟ್/ ಕಲೆಕ್ಟರ್ / ಉಪ ಕಮಿಷ್ ನರ್ / ಪೂರಕ ಉಪ ಕಮಿಷ್ ನರ್/ ಪ್ರಥಮ ಶ್ರೇಣಿ ಸ್ಟೈಪೆಂಡರಿ ಮ್ಯಾಜಿ ಸ್ಟ್ರೇಟ್ / ಸಬ್ ಡಿವಿಶನಲ್ ಮ್ಯಾಜಿ ಸ್ಟ್ರೇಟ್ / ತಾಲೂಕು ಮ್ಯಾಜಿ ಸ್ಟ್ರೇಟ್ / ಎಕ್ಸಿಕ್ಯೂಟಿವ್ ಮ್ಯಾಜಿ ಸ್ಟ್ರೇಟ್ / ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷ್ನರ್

*ii.* *ಚೀಫ್ ಪ್ರೇಸಿಡೆನ್ಸಿ* ಮ್ಯಾಜಿ ಸ್ಟ್ರೇಟ್ /ಅಡಿಶನಲ್ *ಚೀಫ್ ಪ್ರೇಸಿಡೆನ್ಸಿ* ಮ್ಯಾಜಿ ಸ್ಟ್ರೇಟ್ / *ಪ್ರೇಸಿಡೆನ್ಸಿ* ಮ್ಯಾಜಿ ಸ್ಟ್ರೇಟ್

*iii.* *ಚೀಫ್ ಪ್ರೇಸಿಡೆನ್ಸಿ* ಮ್ಯಾಜಿ ಸ್ಟ್ರೇಟ್ /ಅಡಿಶನಲ್ *ಚೀಫ್ ಪ್ರೇಸಿಡೆನ್ಸಿ* ಮ್ಯಾಜಿ ಸ್ಟ್ರೇಟ್ / *ಪ್ರೇಸಿಡೆನ್ಸಿ* ಮ್ಯಾಜಿ ಸ್ಟ್ರೇಟ್

iv. *ಅಭ್ಯರ್ಥಿ ಹಾಗೂ/ ಅಥವ ಅವರ ಕುಟುಂಬವೂ ಸಾಮಾನ್ಯವಾಗಿ ವಾಸಿಸುವ ಸ್ಥಳದ ಉಪ ವಿಭಾಗಾಧಿಕಾರಿ*